ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ಆರ್. ಬಿ ವಕೀಲರಿಂದಃ-**

ನಾನು ಗೋಕಾಕದ ಪಟ್ಟಣದ ಬಸವಮಂಟಪ ಎಕ್ಸಟೆನ್ಸನ ಏರಿಯಾದಲ್ಲಿ ವಾಸವಾಗಿದ್ದೇನೆ. ದಾವಾ ಆಸ್ತಿಗಳಿಂದ ನಮ್ಮ ಮನೆ ಸುಮಾರು ಒಂದೂವರೆ ಕಿ.ಮೀ ದೂರದಲ್ಲಿದೆ. ದಾವಾ ಆಸ್ತಿ ಸಿ ಟಿ ಎಸ್ ನಂಬರ 3226 ನೇದ್ದರ ಉತಾರೆಯನ್ನು ನೋಡುವ ಪ್ರಸಂಗ ನನಗೆ ಬಂದಿರುವುದಿಲ್ಲ. ಸದರಿ ಆಸ್ತಿಯ ಉತಾರೆಯಲ್ಲಿ ಮುಂಚೆ ಯಾರ ಹೆಸರು ದಾಖಲಾಗಿತ್ತು ಹಾಗೂ ವಿವಾದಿತ ಮೃತ್ಯುಪತ್ರ ಆಗುವ ಕಾಲಕ್ಕೆ ಯಾರ ಹೆಸರಿಗೆ ದಾಖಲಿತ್ತು ಎಂದು ನನಗೆ ಗೊತ್ತಿಲ್ಲ. ವಿವಾದಿತ ಮೃತ್ಯುಪತ್ರವನ್ನು ಬರೆಸುವ ಕಾಲಕ್ಕೆ ಮೃತ ಈರಪ್ಪಾ ಸದರಿ ಆಸ್ತಿಯ ಉತಾರೆಯನ್ನು ತಂದಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾವಾ ಆಸ್ತಿ ಸಿ ಟಿ ಎಸ್ ನಂಬರ 3226 ನೇದ್ದು ಈರಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಕೋಣಪ್ಪನ ಆಸ್ತಿ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಈರಪ್ಪನ ತಂದೆ ಕೋಣಪ್ಪನು ದಿ.09.04.1958 ರಂದು ಮೃತಪಟ್ಟಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಸದರಿ ಮೇಲೆ ಹೇಳಿದ ಆಸ್ತಿಗೆ ವಾರಸಾ ಪ್ರಕಾರ ಈರಪ್ಪನ ಹೆಸರು ದಾಖಲಾಗಿರುತ್ತದೆಂದರೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಈರಪ್ಪನ ಕಬೂಲಿಯಂತೆ ಆತನ 08 ಮಕ್ಕಳ ಹೆಸರು ಸದರಿ ಆಸ್ತಿಗೆ ದಾಖಲಾಗಿರುತ್ತದೆಂಬುದು ನನಗೆ ಇವತ್ತಿನವರೆಗೂ ಗೊತ್ತಿರುವುದಿಲ್ಲ. ವಿವಾದಿತ ಮೃತ್ಯುಪತ್ರ ಮಾಡುವ ಕಾಲಕ್ಕೆ ಈರಪ್ಪನ ಹೆಸರು ಸದರಿ ಆಸ್ತಿಗೆ ದಾಖಲಿತ್ತೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವಿವಾದಿತ ಮೃತ್ಯುಪತ್ರ ಮಾಡುವ ದಿನದಂದು ಮೃತ ಈರಪ್ಪಾ ಮುಂಜಾನೆ 10.30 ರಿಂದ 11.00 ಗಂಟೆಯ ಸಮಯದಲ್ಲಿ ನನಗೆ ಹಾಗೂ ಈರಣ್ಣಾ ಕಾತಿಯವರಿಗೆ ಭೇಟ್ಟಿಯಾಗಿರುತ್ತಾರೆ. ಆ ಸಮಯದಲ್ಲಿ ಪ್ರಸ್ತುತ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುವ ಬಗ್ಗೆ ನನ್ನ ಮುಂದೆ ಹೇಳಿರುತ್ತಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ

ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ಮಗ ಕೋಣಪ್ಪ ನನ್ನ ಹಾಗೂ ನನ್ನ ಇತರ ಮಕ್ಕಳ ಮೇಲೆ ಗೋಕಾಕ ನ್ಯಾಯಾಲಯದಲ್ಲಿ ದಾವೆ ಮಾಡಿರುತ್ತಾನೆಂದು ನಾನು ಹೇಳಿ ಬರೆಸಿರುವುದಿಲ್ಲ. ಮೃತ ಈರಪ್ಪಾ ತಾನು ತನ್ನ ಮಗನಾದ ಸುನೀಲ ಜೊತೆ ವಾಸವಾಗಿದ್ದನು ಎಂದು ನನಗೆ ದಾಖಲೆ ತೋರಿಸಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಸಿ ಟಿ ಎಸ್ ನಂಬರ 3226 ನೇದ್ದರಲ್ಲಿನ ಅರ್ಧ ಹಿಸ್ಸೆಯನ್ನು ಭಕ್ಷಿಸ ಪತ್ರದ ಮೂಲಕ ಈರಪ್ಪ ತನ್ನ ಮಗ ಸುನೀಲನಿಗೆ ಬರೆದುಕೊಟ್ಟಿರುವ ಸಂಗತಿಯನ್ನು ನಾನು ಹೇಳಿ ಬರೆಸಿರುವುದಿಲ್ಲ. ಅದೇ ರೀತಿ ವಿವಾದಿತ ಮೃತ್ಯುಪತ್ರ ಮಾಡುವ ಕಾಲಕ್ಕೆ ಮೃತ ಈರಪ್ಪಾ ತಾನು ಅನಾರೋಗ್ಯದಿಂದ ಬಳಲುತ್ತಿದ್ದು, ಜೀವದ ಭರವಸೆ ಇರುವುದಿಲ್ಲ ಎಂದು ಆ ಕಾರಣಕ್ಕಾಗಿ ಮೃತ್ಯುಪತ್ರವನ್ನು ಮಾಡುತ್ತಿರುವುದಾಗಿ ನನಗೆ ಹೇಳಿರುವುದಿಲ್ಲ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ವಿವಾದಿತ ಮೃತ್ಯುಪತ್ರವನ್ನು ಮಾಡುವ ದಿನ ಮೃತ ಈರಪ್ಪ ನನಗೆ ಭೇಟ್ಟಿಯಾಗಿ ಮೃತ್ಯುಪತ್ರ ಮಾಡುವುದಾಗಿ ಹೇಳಿ ತಮ್ಮ ಅಂಗಡಿಗೆ ಹೊರಟು ಹೋಗಿರುತ್ತಾರೆ. ನನಗೆ ಭೇಟ್ಟಿಯಾದ 2-3 ದಿನಗಳ ನಂತರ ವಿವಾದಿತ ಮೃತ್ಯುಪತ್ರವನ್ನು ಮಾಡಿರುತ್ತಾರೆ. ಮೊದಲನೇಯ ಬಾರಿಗೆ ಭೇಟ್ಟಿ ಯಾದ ದಿನ ವಿವಾದಿತ ಮೃತ್ಯುಪತ್ರವನ್ನು ಮಾಡಿರುವುದಿಲ್ಲ. ಸದರಿ ಮೇಲೆ ಹೇಳಿದ ಸಂಗತಿಯು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತಯಾರಿಸುವ ಕಾಲಕ್ಕೆ ನನಗೆ ಮಾಹಿತಿ ಇತ್ತು. ಮೃತ ಈರಪ್ಪಾ ಪುನಃ ನಮ್ಮ ಅಂಗಡಿಗೆ ಬಂದು ವಿವಾದಿತ ಮೃತ್ಯುಪತ್ರಕ್ಕೆ ಸಾಕ್ಷಿ ಸಹಿ ಮಾಡುವುದಿದೆ ಎಂದು ಹೇಳಿ ನನ್ನನ್ನು ದಸ್ತುಬರಹಗಾರರಾದ ಸುಣಧೋಳಿರವರ ಕಚೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ದಸ್ತುಬರಹಗಾರರಾದ ಸುಣಧೋಳಿರವರು

ಮೃತಪಟ್ಟಿರುತ್ತಾರೆ. ಸದರಿ ಮೃತ್ಯುಪತ್ರವನ್ನು ದಸ್ತುಬರಹಗಾರರಾದ ಸುಣಧೋಳಿರವರು ನಾವು ಹೋದ ನಂತರ ತಮ್ಮ ಹಸ್ತಾಕ್ಷರದಿಂದ ಬರೆದಿರುತ್ತಾರೆ . ಸುಣಧೋಳಿಯವರು ತಮ್ಮ ಹಸ್ತಾಕ್ಷರದಿಂದ ಬರೆದಿದ್ದ ಮೃತ್ಯುಪತ್ರಕ್ಕೆ ನಾನು ಸಹಿ ಹಾಕಿರುತ್ತೇನೆ ಅದನ್ನು ಹೊರತುಪಡಿಸಿ ನಾನು ಬೇರೆ ದಾಖಲೆಗೆ ಸಹಿ ಹಾಕಿರುವುದಿಲ್ಲ. ಹಸ್ತಾಕ್ಷರದಿಂದ ಬರೆದ ದಾಖಲೆಯನ್ನು ಉಪನೊಂದಣಿ ಕಚೇರಿಗೆ ತೆಗೆದುಕೊಂಡು ಹೋಗಿರುತ್ತಾರೆ. ಉಪನೊಂದಣಿ ಕಚೇರಿಯಲ್ಲಿ ನಾನು ಮತ್ತೊಂದು ಕಾಗದಪತ್ರಕ್ಕೆ ಸಹಿ ಹಾಕಿದ್ದು, ಅದನ್ನು ಹಸ್ತಾಕ್ಷರದಿಂದ ಬರೆದಿದ್ದರೋ ಅಥವಾ ಬೆರಳಚ್ಚು ಮಾಡಿಸಿದ್ದರೋ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಡಿ.172 ನ್ನು ತೋರಿಸಿ ಸದರಿ ದಾಖಲೆಯು ಸುಣಧೋಳಿಯವರ ಹಸ್ತಾಕ್ಷರದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಬೆರಳಚ್ಚು ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಬೆರಳಚ್ಚು ಮಾಡಿಸಿದ ದಾಖಲೆಗೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಕೋರ್ಟಿನ ಕಾಗದಪತ್ರವನ್ನು ತಂದಿದ್ದರು ಎಂದು ಬರೆಸಿದ್ದು, ಯಾವ ಕಾಗದಪತ್ರವನ್ನು ತಂದಿದ್ದರು ಎಂದರೆ ಸಾಕ್ಷಿಯು ನಿಡಿ.172 ನ್ನು ತಂದಿದ್ದರು ಎಂದು ನುಡಿಯುತ್ತಾರೆ. ವಿವಾದಿತ ಮೃತ್ಯುಪತ್ರ ಅಂದರೆ ನಿಡಿ.172 ರಲ್ಲಿಯ ಸ್ವತ್ತುಗಳು ಮೃತ ಈರಪ್ಪನ ಸ್ವ ಸಂಪಾದಿತ ಸ್ವತ್ತುಗಳೆಂದು ಒಕ್ಕಣಿ ಇದ್ದು, ಆ ಬಗ್ಗೆ ನಾನು ಮೃತ ಈರಪ್ಪನನ್ನು ವಿಚಾರಿಸಿರುವುದಿಲ್ಲ.

ಮೃತ ಈರಪ್ಪನಿಗೆ 08 ಜನ ಗಂಡು ಮಕ್ಕಳು ಇದ್ದು, ಹೆಣ್ಣು ಮಕ್ಕಳು ಎಷ್ಟು ಜನ ಇರುತ್ತಾರೆಂದು ನನಗೆ ಗೊತ್ತಿಲ್ಲ. ನಿಡಿ.172 ಕ್ಕೆ ಸುನೀಲನನ್ನು ಹೊರತುಪಡಿಸಿ ಮೃತ ಈರಪ್ಪನ ಉಳಿದ ಮಕ್ಕಳು ಒಪ್ಪಿಗೆ ಸಹಿ ಮಾಡಿರುತ್ತಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ.172 ರ ಮೊದಲನೇ ಪುಟದ ಮೇಲ್ಭಾಗದಲ್ಲಿ

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ ಹಾಗೂ ಒಟ್ಟು ಪಾವತಿಸಿದ ಮುದ್ರಾಂಕ ಶುಲ್ಕ ಎರಡೂ ಕಾಲಂಗಳನ್ನು ಖಾಲಿ ಬಿಟ್ಟಿರುತ್ತಾರೆಂದರೆ ನಿಜ. ನಿಡಿ 172 ರ ಮೊದಲ ಹಾಗೂ 2 ನೇ ಪುಟ ಬಾಂಡ ಪೇಪರ ಮೇಲೆ ಬೆರಳಚ್ಚು ಮಾಡಿದ್ದು, ಪುಟ ಸಂಖ್ಯೆ 3 ರಿಂದ 5 ನೇದ್ದವುಗಳನ್ನು ಬಿಳಿ ಹಾಳೆಗಳ ಮೇಲೆ ಬೆರಳಚ್ಚು ಮಾಡಿಸಿರುತ್ತಾರೆಂದರೆ ನಿಜ. ನಿಡಿ 172 ರ ಎಲ್ಲಾ ಪುಟಗಳಲ್ಲಿರುವ ಮೃತ ಈರಪ್ಪನ ಸಹಿಗಳು ಬೇರೆ ಬೇರೆಯಾಗಿರುತ್ತವೆ ಎಂದರೆ ನಿಜ. ನಿಡಿ 172 ರ ಮೊದಲ ಪುಟದಲ್ಲಿ ಮೃತ ಈರಪ್ಪನ ಸಹಿಯ ಮೇಲೆ ನಾಲ್ಕು ಅಂಗುಲ ಖಾಲಿ ಜಾಗ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 2 ನೇ ಪುಟದಲ್ಲಿಯೂ ಸಹ ಮೂರು ಅಂಗುಲ ಖಾಲಿ ಜಾಗಾ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 3 ಮತ್ತು 4 ನೇ ಪುಟದಲ್ಲಿ ಯಾವುದೇ ರೀತಿ ಅಂತರ ಇರುವುದಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ. ನಿಡಿ.172ರ 6 ನೇ ಪುಟದಲ್ಲಿ ಕಾಣಿಸುತ್ತಿರುವ ಭಾವಚಿತ್ರದ ಹಿಂದೆ ನಿಂತಿರುವ ವ್ಯಕ್ತಿಯು ಸುನೀಲ ಈರಪ್ಪಾ ಅಂಕದವರ ಇರುತ್ತಾನೆಂದರೆ ಸಾಕ್ಷಿಯು ಯಾವುದೇ ವ್ಯಕ್ತಿ ನಿಂತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಯು ಸುನೀಲ ಈರಪ್ಪಾ ಅಂಕದವರ ಇತನು ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ಸದರಿ ಭಾವಚಿತ್ರ ತೆಗೆಯುವ ಸಮಯದಲ್ಲಿ ನಾನು ಅಲ್ಲಿ ಇರಲೇ ಇಲ್ಲ ಎಂದು ನುಡಿಯುತ್ತಾರೆ. ನಿಡಿ.172 ರಲ್ಲಿ ಎಲ್ಲಿ ಸಹಿ ಹಾಕಿರುತ್ತೀರಿ? ಎಂದರೆ ಸಾಕ್ಷಿಯು ಉಪನೊಂದಣಿ ಕಚೇರಿಯಲ್ಲಿ ಸಹಿ ಹಾಕಿದ್ದು ಆದರೆ ಭಾವಚಿತ್ರ ತೆಗೆಯುವ ಸಮಯದಲ್ಲಿ ನಾನು ಅಲ್ಲಿ ಇರಲಿಲ್ಲ, ಹೊರಗಡೆ ಇದ್ದೇನು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ.172 ನೇದ್ದರ 5 ನೇ ಪುಟವನ್ನು ತೋರಿಸಿ ಅದರಲ್ಲಿ ದಿನಾಂಕ ತಿದ್ದುಪಡಿಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ 172 ರಲ್ಲಿ ಮೃತ ಈರಪ್ಪನನ್ನು ಸುನೀಲ ಈರಪ್ಪ

ಅಂಕದವರ ಚೆನ್ನಾಗಿ ನೋಡಿಕೊಳ್ಳುತ್ತಾನೆಂದು ಒಕ್ಕಣೆ ಇರುವ ಬಗ್ಗೆ ನ ನಗೆ ಮಾಹಿತಿ ಇಲ್ಲ . ಅದೇ ರೀತಿ ಮೃತ ಈರಪ್ಪಾ ನಾನು ನನ್ನ ಮಕ್ಕಳು ಕರೆದುಕೊಂಡು ಹೋಗಿ ಬಟ್ಟೆ ವ್ಯಾಪಾರ ಹೇಗೆ ಮಾಡಬೇಕೆಂದು ಎಲ್ಲರಿಗೂ ಅನುಭವ ಕೊಡಿಸಿರುತ್ತೇನೆಂದು ನಿಡಿ.172 ರಲ್ಲಿ ಒಕ್ಕಣಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ನಿಡಿ.172 ರಲ್ಲಿ ನಾನು ನನ್ನ ಮಕ್ಕಳಿಗೆ ಬಟ್ಟೆ ವ್ಯಾಪಾರದ ಅನುಭವ ಕೊಡಿಸಿದ್ದರೂ ಸಹ ಅವರು ನನ್ನನ್ನು ಹೊಡೆದು ಬಡೆದು ಹೊರಗೆ ಹಾಕಿರುತ್ತಾರೆಂಬ ಒಕ್ಕಣೆ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ಮೃತ ಈರಪ್ಪನು ತನ್ನ ಎಲ್ಲಾ ಗಂಡು ಮಕ್ಕಳ ಹಾಗೂ ಹೆಣ್ಣುಮಕ್ಕಳ ಮದುವೆ ಮಾಡಿರುವ ಬಗ್ಗೆ ನಿಡಿ.172 ರಲ್ಲಿ ಒಕ್ಕಣಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇ ರೀತಿ ನಿಡಿ.172ರಲ್ಲಿ ಮೃತ ಈರಪ್ಪನ ಹೆಂಡತಿ ಬದುಕಿದ್ದಳೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಒಕ್ಕಣಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮೃತ ಈರಪ್ಪನನ್ನು ಸುನೀಲ ಈರಪ್ಪಾ ಅಂಕದವರ ಇತನು ಆಸ್ಪತ್ರೆಗೆ ತೋರಿಸಿ ಔಷದೋಪಚಾರ ಮಾಡಿಸಿರುವ ಬಗ್ಗೆ ನನಗೆ ಕಾಗದವನ್ನು ತೋರಿಸಿರುವುದಿಲ್ಲ ಹಾಗೂ ಅದರ ಬಗ್ಗೆ ನಿಡಿ.172 ರಲ್ಲಿ ಒಕ್ಕಣಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಡಿ.172ನ್ನು ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ಬರೆಸಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಎಷ್ಟು ಆಸ್ತಿಗೆ ಸಂಬಂಧಿಸಿದಂತೆ ಮೃತ್ಯುಪತ್ರ ಮಾಡುತ್ತಿದ್ದು, ಎಷ್ಟು ಆಸ್ತಿಗೆ ಸಂಬಂಧಿಸಿದಂತೆ ಭಕ್ಷಿಸ ಪತ್ರ ಮಾಡಿಸಿರುತ್ತಾನೆಂದು ನನಗೆ ಮಾಹಿತಿ ಇಲ್ಲ. ಅದೇ ರೀತಿ ಪ್ರಸ್ತುತ ಪ್ರಕರಣದ ಬಗ್ಗೆ ನಿಡಿ.172 ರಲ್ಲಿ ಏನು ಸಂಗತಿಯನ್ನು ಬರೆಸಿರುತ್ತಾನೆಂದು ನನಗೆ ಮಾಹಿತಿ ಇಲ್ಲ. ನಾನು ದಸ್ತುಬರಹಗಾರರ ಕಚೇರಿಗೆ ಹೋಗಿದ್ದು, ಸಹಿ ಮಾಡು ಎಂದು ಹೇಳಿದ್ದಕ್ಕೆ ನಿಡಿ.172 ಕ್ಕೆ ಸಹಿ ಹಾಕಿರುತ್ತೇನೆ. ನಿಡಿ.172 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಯಾವ ಯಾವ ಷರತ್ತಿಗೆಒಳಪಟ್ಟು ಮೃತ ಈರಪ್ಪಾ ನಿಡಿ.172 ಕ್ಕೆ

ಸಹಿ ಹಾಕಿರುತ್ತಾನೆಂದು ನನಗೆ ಗೊತ್ತಿಲ್ಲ. ಸದರಿ ಮೃತ ಈರಪ್ಪಾ ನನ್ನ ಸಮಕ್ಷಮ ನಿಡಿ.172 ಕ್ಕೆ ಸಹಿ ಹಾಕಿರುವುದಿಲ್ಲ. ನಿಡಿ.172 ಕ್ಕೆ ನಾನು ಸಹಿ ಹಾಕುವಾಗ ಮೃತ ಈರಪ್ಪಾ , ದಸ್ತುಬರಹಗಾರರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದು ನನಗೆ ಮಾಹಿತಿ ಇಲ್ಲ. ನಿಡಿ.172 ನ್ನು ಮಾಡುವ ಕಾಲಕ್ಕೆ ಮೃತ ಈರಪ್ಪನಿಗೆ ಸುಮಾರು 86 ರಿಂದ 89 ವರ್ಷ ವಯಸ್ಸು ಇದ್ದಿರಬಹುದು. ಆ ಸಮಯದಲ್ಲಿ ಮೃತ ಈರಪ್ಪನಿಗೆ ವಯೋಸಹಜ ಖಾಯಿಲೆಯನ್ನು ಹೊರತುಪಡಿಸಿ ಮಾರಣಾಂತಿಕ ಖಾಯಿಲೆಗಳು ನನಗೆ ತಿಳಿದಂತೆ ಆತನಿಗೆ ಇರಲಿಲ್ಲ. ಸಾಮಾನ್ಯವಾಗಿ 80 ರಿಂದ 90ರ ವಯಸ್ಸಿನಲ್ಲಿ ವ್ಯಕ್ತಿಯ ಕಿವಿಗಳು ಸರಿಯಾಗಿ ಕೇಳಿಸುವುದಿಲ್ಲ ಹಾಗೂ ಕಣ್ಣುಗಳು ಸಹ ಮಂಜಾಗಿರುತ್ತವೆ ಎಂದರೆ ನಿಜ. ಅದೇ ರೀತಿ ಆ ವಯಸ್ಸಿ ನಲ್ಲಿ ಸ್ವಲ್ಪ ಅರಳುಮರಳು ಆಗುವ ಸಾಧ್ಯತೆ ಇರುತ್ತದೆಂದರೆ ನಿಜ. ಮೃತ ಈರಪ್ಪನಿಗೆ ಮೃತ್ಯುಪತ್ರವನ್ನು ಬರೆಯುವ ಉದ್ದೇಶ ಏನು ಇತ್ತು ಎನ್ನುವ ಬಗ್ಗೆ ನನಗೆ ಇವತ್ತಿಗೂ ಸಹ ಗೊತ್ತಿಲ್ಲ.

ಸುನಿಲ ಈರಪ್ಪ ಅಂಕದವರ ಸುಮಾರು 20 ವರ್ಷಗಳಿಂದ ಪರಿಚಯ. ನಾನು ಮತ್ತು ಅಂಕದವರ ಕುಟುಂಬದವರು ಬೇರೆ ಬೇರೆ ಸಮಾಜದವರು ಎಂದರೆ ನಿಜ. ಅಂಕದವರ ಸಮಾಜದ ಹಿರಿಯರು ಮೃತ್ಯುಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂಕದವರ ಸಮಾಜದಲ್ಲಿ ಬಾಣಕಾರ ಹಾಗೂ ಮಾಳಗಿ ಎಂಬ ಕುಟುಂಬದವರು ಹಿರಿಯರು ಇರುತ್ತಾರೆಂದರೆ ನಿಜ. ಮೃತ ಈರಪ್ಪನಿಗೆ ನಿಡಿ.172 ರಂತೆ ಮೃತ್ಯುಪತ್ರವನ್ನು ಬರೆಯುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ.172 ನ್ನು ಬರೆಸುವ ಕಾಲಕ್ಕೆ ಸುನೀಲ ಈರಪ್ಪಾ ಅಂಕದವರ ನನ್ನನ್ನು ದಸ್ತುಬರಗಾರರ ಬಳಿ ಕರೆದುಕೊಂಡು ಹೋಗಿರುತ್ತಾನೆಂದರೆ ಸರಿಯಲ್ಲ. ಸದರಿ ಸುನೀಲ ಮತ್ತು ದಸ್ತುಬರಹಗಾರರಾದ ಪ್ರಲ್ಹಾದ

ಸುಣಧೋಳಿಯವರು ಆತ್ಮೀಯ ಸ್ನೇಹಿತರು ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣ ಚಾಲ್ತಿಯಿಲ್ಲಿರುವಾಗ ಸುನೀಲ, ನಾನು, ದಸ್ತುಬರಗಾರರು ಸೇರಿಕೊಂಡು ಅರಿವು ಮರೆವು ಇರುವ ಮೃತ ಈರಪ್ಪನನ್ನು ಉಪನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿ ನಿಡಿ.172 ರಂತೆ ಖೊಟ್ಟಿ ಮೃತ್ಯು ಪತ್ರವನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು, ಪ್ರತಿವಾದಿ ನಂಬರ 11 ಸುನೀಲ ಈರಪ್ಪ ಅಂಕದವರ ಇತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀಸವಾಲುಃ</u> ಪ್ರತಿವಾದಿ ನಂಬರ 15 ರಿಂದ 17ರವರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಿದ್ದು, ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಕಂಡುಬರದೇ ಇರುವುದರಿಂದ ಅವರ ಪರ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ